ಶ್ರೀ ವೀರಣ್ಣ.—ಬೆಳಗಿನವರೆಗೆ ಈ ಪ್ರಶ್ನೆಗೆ ಉತ್ತರ ಬಂದಿರಲಿಲ್ಲ ಈಗ ಬಂದಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದು ಸರ್ಕಾರದ ಇನ್‌ಎಫಿಷಿಯೆನ್ಸಿಯನ್ನು ತೋರಿಸುತ್ತದೆ. ಕೊನೆಯಪಕ್ಷ ಕಾಪಿಯನ್ನಾದರೂ ಕೊಟ್ಟರೆ ಓದಿಕೊಂಡು ಕೇಳಬಹುದು.

ಅಧ್ಯಕ್ಷರು.— ಕೊಡಿಸುತ್ತೇನೆ. ನಿಮ್ಮದೇನು ಪಕಾಲತ್ತು ಬೇಡ, ಕುಳಿತುಕೊಳ್ಳಿ. ನಾನು ಅವರ ಬಗ್ಗೆ ಎಚ್ಚರಿಕೆ ವಹಿಸುತ್ತೇನೆ.

ಶ್ರೀ ವೀರಣ್ಣ.—ಕೊನೆಗೆ ತೆಗೆದುಕೊಳ್ಳಿ, ಉತ್ತರ ಕಳುಹಿಸಿಕೊಡುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಉತ್ತರ ಇದೆ ಎಂದು ಹೇಳಿದಿರು. ಉತ್ತರ ಹೇಳಿ ಅಂದಾಗ ಇಲ್ಲ ಎನ್ನುತ್ತಾರೆ. ಮಾನ್ಯ ಮಂತ್ರಿಗಳಿಗೆ ಎಳ್ಳಷ್ಟೂ ಗೌರವ ಇಲ್ಲವೇ? ಅವರು ಸ್ವಾಮಿಗಳ ಗದ್ದುಗೆಗಾದರೂ ಹೋಗಲಿ ಎಲ್ಲಿಗಾದರೂ ಹೋಗಲಿ. ತಾವು ಮೊನ್ನೆ ಆದೇಶ ಕೊಟ್ಟಿರಿ.....

ಅಧ್ಯಕ್ಷರು.—ಉತ್ತರ ಕಳುಹಿಸುವಾಗ ಹೆಚ್ಚಿಗೆ ಪ್ರತಿಗಳನ್ನು ಕಳುಹಿಸಿ ಎಂದು ಹೇಳಬೇಕು. ಒಬ್ಬರೇ ಓದಿದರೆ ಬೇರೆಯವರಿಗೆ ಅವರ ಪ್ರತಿ ಕೊಡುವುದು ಬೇಡವೆ ? ಎಲ್ಲಾ ಅಧಿಕಾರಿಗಳಿಗೂ ಹೆಚ್ಚಿಗೆ ಪ್ರತಿ ಕಳುಹಿಸುವಂತೆ ಹೇಳಬೇಕು.

ಶ್ರೀ ವೀರಣ್ಣ.—ಸರಿ ಸ್ವಾಮಿ.

ಅಧ್ಯಕ್ಷರು.—ಸದಸ್ಯರಿಗೆ ಮಾಹಿತಿ ಸಿಕ್ಕಿದರೆ ಅದು ಅವರಿಗೆ ಬಜೆಟ್ ಭಾಷಣದಲ್ಲಿ ಅನುಕೂಲ ವಾಗುತ್ತದೆ. ಆದ್ದರಿಂದ ಆ ಪ್ರಶ್ನೆಯನು ಆ ಮೇಲೆ ತೆಗೆದುಕೊಳ್ಳೋಣ. ಪ್ರತಿಯನ್ನು ಕಳುಹಿಸಿ ಕೊಡಿ ಓದಿಕೊಳ್ಳಲಿ.

ರಾಜ್ಯದಲ್ಲಿ ಬರ ಪರಿಹಾರ ಕಾಮಗಾರಿಗಳಿಗಾಗಿ ಖರ್ಚು ಮಾಡಲಾದ ಹಣ

೩೮೨. ಶ್ರೀ ಡಿ. ಟಿ. ಜಯಕುಮಾರ್ (ನಂಜನಗೂಡು).—ಮಾನ್ಯ ಕಂದಾಯ, ಯೋಜನೆ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ೧೯೮೬-೮೭ನೇ ಸಾಲಿನಲ್ಲಿ ಬರಗಾಲ ಪರಿಹಾರ ಕಾಮಗಾರಿಗಳಿಗೆ ಖರ್ಚು ಮಾಡಿದ ಒಟ್ಟು ಹಣವೆಷ್ಟು ?

(ಆ) ಇದರಲ್ಲಿ ಕೇಂದ್ರ ಸರ್ಕಾರದ ಹಣವೆಷ್ಟು ? ಮತ್ತು ರಾಜ್ಯ ಸರ್ಕಾರದ ಹಣವೆಷ್ಟು ?

(ಇ) ಇದರಲ್ಲಿ ವೆಚ್ಚವಾಗದೇ ಉಳಿದಿರುವ ಹಣವೆಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

(ಅ) ೧೯೮೬-೮೭ನೇ ಸಾಲಿನಲ್ಲಿ (೧-೪-೧೯೮೬ ರಿಂದ ೩೦-೬-೧೯೮೭ರ ವರೆಗೆ) ಬರಗಾಲ ಪರಿಹಾರ ಕಾಮಗಾರಿಗಳಿಗಾಗಿ ವಿವಿಧ ಯೋಜನಾ ಕಾರ್ಯಕ್ರಮಗಳೂ ಸೇರಿದಂತೆ ಒಟ್ಟು ೬೬.೪೪ ಕೋಟಿ ರೂಪಾಯಿಗಳನ್ನು ಈಗಾಗಲೇ ಖರ್ಚು ಮಾಡಲಾಗಿದೆ. ಇದರಲ್ಲಿ ಬರಗಾಲ ಶೀರ್ಷಿಕೆಯಲ್ಲೇ ಖರ್ಚಾದ ಹಣ ೪೫.೫೬ ಕೋಟಿ ರೂಪಾಯಿಗಳಷ್ಟು ಇದೆ. ಹೈಡ್ರಾಲಿಕ್ ರಿಗ್‌ಗಳು ಕೊಳ್ಳುವಿಕೆಗೆ ೭.೫೦ ಕೋಟಿ ಮತ್ತು ಬೆಳೆಗಳ ಸಾಲ ಮರು ಹೊಂದಾಣಿಕೆಗಾಗಿ ೧.೪೬ ಕೋಟಿ ರೂ.ಗಳನ್ನು ಕಾದಿರಿಸಲಾಗಿದೆ.

(ಆ) ಇದೇ ಅವಧಿಗೆ ಕೇಂದ್ರ ಸರ್ಕಾರವು ಮುಂಗಡ ಯೋಜನೆ ನೆರವಿನಡಿಯಲ್ಲಿ ೫೦.೦೦ ಕೋಟಿ ರೂ.ಗಳಿಗೆ ಮಿತಿ ನಿಗದಿಪಡಿಸಿ ಮುಂಜೂರಾತಿ ನೀಡಿದೆ. ಈ ಹಣವು ರಾಜ್ಯದ ಯೋಜನಾ ಹಣವೇ ಇದ್ದು ಅದರ ಮುಂಗಡವಾಗಿದೆ, ಮತ್ತು ಇದರಲ್ಲಿ ರಾಜ್ಯಕ್ಕೆ ವಿಂಗಲಾದ ಮಾರ್ಜಿನ್ ಹಣ (ಮಾರ್ಜಿನ್ ಮನಿ) ಪಾದ ೬.೦೦ ಕೋಟಿ ರೂ.ಗಳೂ ಸೇರಿವೆ.

(ಇ) ಇದರಲ್ಲಿ (ಅಂದರೆ ೫೦.೦೨ ಕೋಟಿ ರೂ.ಗಳಲ್ಲಿ) ಉಳಿದಿರುವುದು ೬.೪೪ ಕೋಟಿ ರೂ.ಗಳು ಮಾತ್ರ. ಹೈಡ್ರಾಲಿಕ್ ರಿಗ್‌ಗಳು ಕೊಳ್ಳುವಿಕೆ ಮತ್ತು ಬೆಳೆಗಳ ಸಾಲ ಮರು ಹೊಂದಾಣಿಕೆಗೆ ಕಾದಿರಿಸಿರುವ ೮.೫೬ ಕೋಟಿ ರೂ.ಗಳನ್ನು ಇನ್ನೂ ಖರ್ಚು ಮಾಡ ಬೇಕಾಗಿದೆ.